**ಎಂ.ವಿ.ಸಿ.95/2025, ಪಿ.ಡಬ್ಲ್ಯೂ-3 ಹೆಸರುಃ ದ್ಯಾಮಪ್ಪ ಜಿ.ಆರ್**

**ದಿಃ17-12-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಪಿ.ಆರ್.ಎಲ್ ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರಃ ಶ್ರೀ ಪಿ.ಎನ್ ವಕೀಲರಿಂದಃ**

ಅಪಘಾತದ ಸಮಯದಲ್ಲಿ ನಾನು ನನಗೆ ಸೇರಿದ ಕೆ.ಎ-16-ಓ-0743 ಬೈಕಿನಲ್ಲಿ ಹೋಗುತ್ತಿದ್ದೆನು. ಸದರಿ ಬೈಕು ನನಗೆ ಸೇರಿದ್ದು, ನಾನೇ ಆರ್.ಸಿ ಮಾಲೀಕನಾಗಿರುತ್ತೇನೆ. ಅಪಘಾತದ ದಿನದಂದು ನಾನು ಚಿತ್ರದುರ್ಗದಿಂದ ನಂದನಹೊಸೂರಿಗೆ ಹೋಗುತ್ತಿದ್ದೆನು. ಅಪಘಾತ ಸಂಜೆ 6.15 ಕ್ಕೆ ಆಗಿರುತ್ತದೆ. ಸದರಿ ಸಮಯದಲ್ಲಿ ಮಬ್ಬು ಕತ್ತಲಾಗಿರುತ್ತದೆ ಎಂದರೆ ಸರಿ. ನನ್ನ ಮುಂಭಾಗ ಓಮಿನಿ ಹೋಗುತ್ತಿತ್ತು. ಅದರ ಮುಂಭಾಗದಲ್ಲಿ ಬೈಕು ಎಡಬದಿಯಲ್ಲಿ ಹೋಗುತ್ತಿತ್ತು. ಸದರಿ ಅಪಘಾತ ಆದಂತಹ ಸ್ಥಳ ಎನ್.ಹೆಚ್ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾಹನ ದಟ್ಟಣೆ ಯಾವಾಗಲೂ ಇರುತ್ತದೆ ಎಂದರೆ ಸರಿ. ನನ್ನ ಮುಂಭಾಗದಲ್ಲಿ ಸುಮಾರು ನೂರು ಅಡಿ ಅಂತರದಲ್ಲಿ ಓಮಿನಿ ವಾಹನ ಹೋಗುತ್ತಿತ್ತು. ಓಮಿನಿ ವಾಹನ ಮತ್ತು ಬೈಕಿನ ನಡುವೆ ಸುಮಾರು 10 ಅಡಿ ಅಂತರ ಇತ್ತು. ಸದರಿ ಸಮಯದಲ್ಲಿ ಬೈಕಿನಲ್ಲಿ ನಾನು ಮಾತ್ರ ಹೋಗುತ್ತಿದ್ದೆನು. ಬೈಕಿನ ಚಾಲಕನು ಬೈಕನ್ನು ಏಕಾಏಕಿ ಬಲಭಾಗಕ್ಕೆ ತಿರುಗಿಸಿದ ಕಾರಣ ಓಮಿನಿ ವಾಹನದ ಚಾಲಕನು ನಿಯಂತ್ರಿಸಲಾಗದೆ ಬೈಕಿಗೆ ಡಿಕ್ಕಿಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಇತರೆ ಯಾವುದೇ ವಾಹನಗಳು ಇರಲಿಲ್ಲ. ನನ್ನ ಮುಂಭಾಗ ಓಮಿನಿ ಹೋಗುತ್ತಿದ್ದ ಕಾರಣ ಬೈಕು ಹೋಗುವ ಬಗ್ಗೆ ನನಗೆ ಕಾಣುವುದಿಲ್ಲ ಎಂದರೆ ಸರಿಯಲ್ಲ. ಅಪಘಾತದ ನಂತರ ನಾನು ಸ್ಥಳಕ್ಕೆ ಹೋಗಿದ್ದು, ಅಕ್ಕಪಕ್ಕದವರು ಸಹ ಸದರಿ ಸ್ಥಳಕ್ಕೆ ಬಂದಿರುತ್ತಾರೆ. ಆಸ್ಪತ್ರೆಗೆ ಕಾರಿನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಅಪಘಾತದ ಸ್ಥಳದಲ್ಲಿ ನಾನು ಅಪಘಾತದ ನಂತರ ಸುಮಾರು 30 ನಿಮಿಷಗಳ ಕಾಲ ಇದ್ದೆನು. ಸ್ಥಳಕ್ಕೆ ಪೊಲೀಸರು ಬಂದಿದ್ದರು. ನಾನು ಓಮಿನಿ ವಾಹನದ ಚಾಲಕನನ್ನು ನೋಡಿಲ್ಲ ಮತ್ತು ಓಮಿನಿ ವಾಹನದ ಸಂಖ್ಯೆ ಗೊತ್ತಿಲ್ಲ. ನಾನು ಅಪಘಾತದ ಕುರಿತು ಹೊಳಲ್ಕೆರೆ ಸಿವಿಲ್ ನ್ಯಾಯಾಲಯದಲ್ಲಿನ ಪ್ರಕರಣದಲ್ಲಿ ಸಾಕ್ಷ್ಯ

ನುಡಿದಿಲ್ಲ. ನನ್ನನ್ನು ಇಂದು ನ್ಯಾಯಾಲಯಕ್ಕೆ ಹೆಚ್.ಡಿ ಪುರ ಉಪ ಪೊಲೀಸ್ ಠಾಣೆಯ ಪೊಲೀಸರು ಕರೆದುಕೊಂಡು ಬಂದಿದ್ದಾರೆ. ಪೊಲೀಸರು ನನಗೆ ಅರ್ಜಿದಾರರ ಪರ ವಕೀಲರ ಮೊಬೈಲ್ ಸಂಖ್ಯೆಯನ್ನು ನೀಡಿ ಅವರನ್ನು ಸಂಪರ್ಕಿಸುವಂತೆ ಹೇಳಿದರು. ನನ್ನ ಸಾಕ್ಷ್ಯದ ಪ್ರಮಾಣಪತ್ರದಲ್ಲಿನ ಅಂಶಗಳನ್ನು ಅಪಘಾತದ ದಿನದಂದು ಸಂಜೆ ಪೊಲೀಸರಿಗೆ ಹೇಳಿ ಬರೆಸಿರುತ್ತಾರೆ. ಸದರಿ ದಾಖಲಾತಿಗೆ ನಾನು ಸಹಿ ಮಾಡಿಲ್ಲ. ಈ ಪ್ರಕರಣವನ್ನು ಅರ್ಜಿದಾರರು ಪರಿಹಾರವನ್ನು ಕೋರಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ಅಪಘಾತದ ದಿನದಂದು ನೀಡಿರುವ ಹೇಳಿಕೆಯ ಬಗ್ಗೆ ಸಾಕ್ಷ್ಯ ನುಡಿಯಲು ಬನ್ನಿ ಎಂದು ಹೇಳಿದ್ದು, ಹಾಗಾಗಿ ನಾನು ಇಂದು ನ್ಯಾಯಾಲಯಕ್ಕೆ ಬಂದಿದ್ದೇನೆ. ಅಪಘಾತವು ದಿಃ 21.10.2024 ರಂದು ಆಗಿರುತ್ತದೆ. ಅಪಘಾತದ ದಿನದಂದು ನಾನು ತನಿಖಾಧಿಕಾರಿಗೆ ಹೇಳಿಕೆಯನ್ನು ನೀಡಿದ್ದು, ಅದನು ಹೊರತುಪಡಿಸಿ ಯಾವುದೇ ಹೇಳಿಕೆಯನ್ನು ನೀಡಿಲ್ಲ. ಈ ಅರ್ಜಿಯನ್ನು ಯಾರು ಸಲ್ಲಿಸಿದ್ದಾರೆ ಮತ್ತು ಯಾವ ಉದ್ದೇಶಕ್ಕಾಗಿ ಸಲ್ಲಿಸಿದ್ದಾರೆ ಎಂದು ಗೊತ್ತಿಲ್ಲ. ಸಾಕ್ಷಿ ತಾನು ಸಲ್ಲಿಸಿರುವ ಸಾಕ್ಷ್ಯದ ಪ್ರಮಾಣಪತ್ರವನ್ನು ನೋಡಿ ಭಾಗ್ಯಮ್ಮರವರು ಆಕೆಯ ಪತಿಯ ಮರಣದ ಕುರಿತು ಪರಿಹಾರ ಕೋರಿ, ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಅರ್ಜಿದಾರರು ನನಗೆ ಸಂಬಂಧಿಕರಲ್ಲ. ಅಪಘಾತದ ಕುರಿತು ನನಗೆ ಮಾಹಿತಿ ಇಲ್ಲದಿದ್ದಾಗ್ಯೂ, ಸುಳ್ಳು ಸಾಕ್ಷ್ಯದ ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೂ ಮತ್ತು ಅರ್ಜಿದಾರರು ಸಲ್ಲಿಸಿರುವ ಅರ್ಜಿಗೂ ಹಾಗೂ ಕ್ರಿಮಿನಲ್ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ, ಸಾಕ್ಷಿ ಅಪಘಾತದ ಕುರಿತು ನೀಡಿರುವ ಹೇಳಿಕೆ ಬಗ್ಗೆ ಸಾಕ್ಷ್ಯ ನುಡಿಯಲು ಬನ್ನಿ ಎಂದು ಹೇಳಿದ್ದರಿಂದ ನಾನು ಬಂದಿದ್ದೇನೆ ಎಂದು ಹೇಳುತ್ತಾರೆ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ